ಶ್ರೀ ಸಂಜಯ ಬಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಉತ್ತರ ಸ್ಪಷ್ಟವಿಲ್ಲ, ಅದಕ್ಕೇ ಕೇಳುತ್ತಿದ್ದೇನೆ. ತಾವು ಕೊನೆಯ line ಓದಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ತಮ್ಮ ಆತಂಕ ಏನಿದೆ, ಅದನ್ನು ಮಾನ್ಯ ಸಚಿವರ ಗಮನಕ್ಕೆ ತಂದು, ತಮಗೆ ಉತ್ತರವನ್ನು ಕೊಡಿಸುವಂಥ ಪ್ರಯತ್ನ ಮಾಡುತ್ತೇನೆ.

ಶ್ರೀ ಸಂಜಯ ಬಿ. ಪಾಟೀಲ್: Ok.

ಅಧ್ಯಕ್ಷರು: ಮಾನ್ಯ ಎಂ. ಕೃಷ್ಣಾರೆಡ್ಡಿಯವರೆ ಕೇಳಿ.

10. ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿ 2014–15ನೇ ಸಾಲಿನಲ್ಲಿ ಮಂಜೂರಾದ 14 ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯಾರಂಭ ಮಾಡದಿರುವ ಬಗ್ಗೆ.

ಶ್ರೀ ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ): ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿ 2014–15ನೇ ಸಾಲಿನಲ್ಲಿ ಮಂಜೂರಾದ 14 ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯಾರಂಭ ಮಾಡದಿರುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು: ಈ ವಿಷಯಕ್ಕೆ ಆಗಲೇ ಉತ್ತರ ಕೊಟ್ಟಿಲ್ಲವೇ?

ಶ್ರೀ ಎಂ. ಕೃಷ್ಣಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದು ಬೇರೆ, ಗಮನ ಸೆಳೆಯುವ ಸೂಚನೆ.

ಅಧ್ಯಕ್ಷರು: ಉತ್ತರ ಕೊಟ್ಟಿಲ್ಲವೇ?

ಶ್ರೀ ಎಂ. ಕೃಷ್ಣಾರೆಡ್ಡಿ: ಕೊಟ್ಟಿದ್ದಾರೆ.

ಅಧ್ಯಕ್ಷರು: ಮತ್ತೆ ಏಕೆ?

ಶ್ರೀ ಎಂ. ಕೃಷ್ಣಾರೆಡ್ಡಿ: ಇದಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತಿದ್ದೆನೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ಆಗಲೇ ಇದಕ್ಕೆ ಉತ್ತರ ಕೊಟ್ಟಿಲ್ಲವೇ?

ಶ್ರೀ ಎಂ. ಕೃಷ್ಣಾರೆಡ್ಡಿ: ಅದು ಬೇರೆ, ಅದು ನಮ್ಮ ಹೊಲ ನಮ್ಮ ದಾರಿಗೆ ಸಂಬಂಧಪಟ್ಟಂತೆ ಕೇಳಿದ್ದು.

ಅಧ್ಯಕ್ಷರು: ಹೇಳಿ.

ಶ್ರೀ ಎಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಹೇಳಿಕೆ:

(ಅ) 2013–14ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನಲ್ಲಿ 14 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು M/s Fivebro International PVT., LTD., Ahmedabad ಸಂಸ್ಥೆಯೊಂದಿಗೆ 03 ತಿಂಗಳ ಕಾಲಾವಕಾಶ ನೀಡಿ, ದಿನಾಂಕ: 22.02.2014 ರಂದು ಗುತ್ತಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.

ಅನುಮೋದಿತ ಎಲ್ಲಾ ಜನವಸತಿಗಳಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ ಸಂರಕ್ಷಣಾ ಕೊಠಡಿಗಳನ್ನು (Sheds) ನಿರ್ಮಿಸಲಾಗಿರುತ್ತದೆ. M/s Fivebro International PVT., LTD., Ahmedabadರವರಿಂದ ಈವರೆಗೂ 03 ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಿ, ಕಾರ್ಯಾರಂಭ (Commission) ಮಾಡಲಾಗಿದ್ದು, ದುರಸ್ಥಿಯಲ್ಲಿವೆ. 07 ಗ್ರಾಮಗಳಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲಾಗಿದ್ದು, ಕಾರ್ಯಾರಂಭ ಮಾಡಬೇಕಾಗಿದೆ. ಉಳಿದ 04 ಗ್ರಾಮಗಳಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಬೇಕಾಗಿರುತ್ತದೆ. ಅನುಮೋದನೆಗೊಂಡಿರುವ ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಿ, ಕಾರ್ಯಾರಂಭ ಮಾಡಿ ಗುತ್ತಿಗೆ ಕರಾರಿನಂತೆ ಮುಂದಿನ ನಿರ್ವಹಣೆ ಮಾಡುವಂತೆ ಸೂಚಿಸಿ ಸಂಸ್ಥೆಗೆ ಅನೇಕ ಬಾರಿ ಪತ್ರಗಳನ್ನು

ಬರೆದು ಸೂಚಿಸಲಾಗಿದೆ. ದಿನಾಂಕ: 02–05–2015ರಲ್ಲಿ ಸದರಿ ಸಂಸ್ಥೆಯ ಒಪ್ಪಂದ ಕರಾರನ್ನು ರದ್ದುಗೊಳಿಸಲು ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರುರವರಿಗೆ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರುರವರಿಗೆ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕಬಳ್ಳಾಪುರರವರು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅದರಂತೆ ಕ್ರಮವಹಿಸುವ ಸಲುವಾಗಿ ಸಂಸ್ಥೆಗೆ ಎಚ್ಚರಿಕೆ ನೀಡಲಾಗಿದೆ.

(ಆ) 2014–15ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂ:ಗ್ರಾಅಪ/67/ಗ್ರಾನೀಸ(8)2014(ಭಾಗ–1) ಬೆಂ. ದಿನಾಂಕ: 31.01.2015 ರಲ್ಲಿ ಚಿಂತಾಮಣಿ ತಾಲ್ಲೂಕಿಗೆ 29 ಶುದ್ಧ ಕುಡಿಯುವ ನೀರಿನ ಘಟಕಗಳನ್ನು 500 ಜನಸಂಖ್ಯೆಗಿಂತಲೂ ಮೇಲ್ಪಟ್ಟ ಜನವಸತಿಗಳಲ್ಲಿ ಅಳವಡಿಸಲು ಮಂಜೂರಾತಿ ದೊರೆತಿರುತ್ತದೆ. ಇವುಗಳನ್ನು CE/RWSSD ರವರು ನಿರ್ದಿಷ್ಟ ಪಡಿಸುವ ತಂತ್ರಜ್ಞಾನ, ಸಾಮರ್ಥ್ಯ, ಮಾದರಿ/ಗುಣಮಟ್ಟದ ನೀರು ಶುದ್ಧೀಕರಣ ಘಟಕಗಳನ್ನು KTPP ನಿಯಮಗಳನ್ವಯ ಮತ್ತು ಸರ್ಕಾರದ ಮಾರ್ಗಸೂಚಿಗಳನ್ವಯ ಜಿಲ್ಲಾ ಪಂಚಾಯತ್ ನಿರ್ಧರಿಸುವ ಸಹಕಾರ ಸಂಸ್ಥೆ / ಸರ್ಕಾರೇತರ ಸಂಘ / ಗ್ರಾಮ ಪಂಚಾಯತ್‌ಗಳ ಸಹಭಾಗಿತ್ವದಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು. ಪ್ರತಿ ಘಟಕಕ್ಕೆ ಸರ್ಕಾರದಿಂದ ಗರಿಷ್ಠ ರೂ. 7.50 ಲಕ್ಷಗಳ ಮಿತಿಯೊಳಗೆ ಅನುಮೋದಿತ ಸಹಕಾರ ಸಂಸ್ಥೆ / ಸರ್ಕಾರೇತರ ಸಂಘ / ಗ್ರಾಮ ಪಂಚಾಯತ್‌ಗಳಿಗೆ ಪಾವತಿಸಲು ಅವಕಾಶವಿರುತ್ತದೆ.

ಚಿಂತಾಮಣಿ ತಾಲ್ಲೂಕಿನ 14 ಶುದ್ಧ ಕುಡಿಯುವ ನೀರಿನ ಘಟಕಗಳ ಪ್ರಸ್ತುತ ವಸ್ತು ಸ್ಥಿತಿಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಮುಂದುವರೆದ ದಿನಾಂಕ:11.06.2015 ರಂದು ಸನ್ಮಾನ್ಯ

ಇಲಾಖಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ವಿಧಾನ ಸಭೆಯ ಸಮ್ಮೇಳನ ಸಭಾಂಗಣದಲ್ಲಿ ನೀರು ಶುದ್ಧೀಕರಣ ಘಟಕಗಳ ವಾಸ್ತವ ಸ್ಥಿತಿ ಹಾಗೂ ಅನುಷ್ಠಾನಕ್ಕೆ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಸಭೆ ನಡೆದು ಅದರಲ್ಲಿ ನೀರು ಶುದ್ಧೀಕರಣ ಘಟಕಗಳ ಅನುಷ್ಠಾನಕ್ಕಾಗಿ ಆಗಸ್ಟ್ 1ನೇ ದಿನವನ್ನು ಅಂತಿಮ ಗಡುವೆಂದು ಕಾಲಮಿತಿ ವಿಧಿಸಿ ನೀರು ಶುದ್ಧೀಕರಣ ಘಟಕಗಳನ್ನು ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

ಶ್ರೀ ಎಂ. ಕೃಷ್ಣಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದನ್ನು M/s Fivebro International Privet., Limited., Ahmedabad ಸಂಸ್ಥೆಗೆ ಗುತ್ತಿಗೆ ಕೊಟ್ಟು 17 ತಿಂಗಳುಗಳಾಗಿದೆ. ಇವತ್ತಿನವರೆಗೂ ಘಟಕಗಳನ್ನು ಅಳವಡಿಸಿಲ್ಲ. ಅದರಿಂದ ಗುತ್ತಿಗೆದಾರರು ಯಾರಿದ್ದಾರೆ, ಆ ಒಂದು ಕರಾರು ಒಪ್ಪಂದ ಯಾರಿಗೆ ಆಗಿದೆ, ಅದನ್ನು ರದ್ದುಗೊಳಿಸಬೇಕು ಮತ್ತು ಆ ಗುತ್ತಿಗೆದಾರರನ್ನು ಕಪ್ಪು ಪೆಟ್ಟಿಗೆ ಸೇರಿಸಬೇಕು.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಹೇಳಿಕೆಯಲ್ಲಿ ಏನು ಹೇಳಿದ್ದಾರೆ?

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವರಿಗೆ ಕೊಟ್ಟಿರುವಂಥ ಉತ್ತರದಲ್ಲಿ ನಾವು ಕಳೆದ ವಾರ ಸಭೆ ಮಾಡಿದ್ದೇವೆ. ಆಗ ಕಂಪನಿಯವರನ್ನು ಕರೆದು ಅವರಿಗೆ ಏನು ನಿರ್ದೇಶನ ಕೊಟ್ಟಿದ್ದೇವೆಂಬುದನ್ನು ಹೇಳಿದ್ದೇವೆ. ಆಗಸ್ಟ್ 1ನೇ ತಾರೀಖಿನೊಳಗಾಗಿ ಅವುಗಳನ್ನು Commission ಮಾಡಬೇಕೆಂದು ಹೇಳಿದ್ದೇವೆ. ಒಂದು ವೇಳೆ ಆಗಸ್ಟ್ 5ನೇ ತಾರೀಖಿನ ನಂತರವೂ Commission ಆಗಲಿಲ್ಲವೆಂದರೆ, ಅವರನ್ನು block list ಮಾಡುತ್ತೇವೆ.

ಅಧ್ಯಕ್ಷರು: Ok. ಡಾ॥ ವಿಶ್ವನಾಥ ಈ ಪಾಟೀಲ್‌ರವರೆ ಕೇಳಿ.

11. ವಿಷಯ: ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಚಚಡಿ ಮತ್ತು ಮುಡಗೋಡ ಏತ ನೀರಾವರಿ ಯೋಜನೆಗಳ ಅನುಷ್ಠಾನ ವಿಳಂಬವಾಗುತ್ತಿರುವ ಬಗ್ಗೆ.